**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.215/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸ ಜಿ | ಸಿಡಬ್ಲ್ಯೂ: **02** |
| ತಂದೆ/ಗಂಡನ ಹೆಸರು | : | ಗೋವಿಂದಪ್ಪ | ಪಿಡಬ್ಲ್ಯೂ: **01** |
| ವಯಸ್ಸು | : | 55 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | : | ಎ ಎಸ್ ಐ, ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆ | 14.11.2025 |
| ವಾಸ ಸ್ಥಳ | : | ಶಿಡ್ಲಘಟ್ಟ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:

ನಾನು ದಿ:**05.06.2022** ರಿಂದ ನಾನು ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಸಹಾಯಕ ಪೋಲೀಸ್ ಆರಕ್ಷಕ ಉಪ ನೀರೀಕ್ಷಕನಾಗಿ ಕರ್ತವ್ಯ ನಿರ್ವಸಿಸುತ್ತಿದ್ದೇನೆ.

**2.** ದಿ:**23.06.2022** ರಂದು ಚಾ.ಸಾ.**1** ರವರು ನನ್ನನ್ನು ಅಪ್ಪೇಗೌಡನಹಳ್ಳಿಯಲ್ಲಿ ಒಬ್ಬ ಆ ಸಾಮಿ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ನನ್ನನ್ನು ಕರೆದುಕೊಂಡು ಹೋದರು. **1** ನೇ ಆರೋಪಿಯ ಚಿಲ್ಲರೆ ಅಂಗಡಿಯನ್ನು ಪರಿಶೀಲಿಸಿದಾಗ **90** ಎಂ ಎಲ್ ನ **84** ರಾಜ ವಿಸ್ಕಿಯ ಟೆಟ್ರಾ ಪ್ಯಾಕ್ ಗಳಿದ್ದವು. ಸದರಿ ಮಧ್ಯವನ್ನು ಚಾ,ಸಾ.**1** ರವರು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡರು. ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಮಾಲು ಸಮೇತ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದರು. ಸಾಕ್ಷಿಗೆ ಮಾಲು ಅಮಾನತ್ತು ಪಂಚನಾಮೆಯನ್ನು ತೊರೀಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಅಮಾನತ್ತು ಪಂಚನಾಮೆಯನ್ನು ನಿ.ಪಿ.**1** ಎಂದು ಸಹಿಯನ್ನು ನಿ.ಪಿ.**1**(ಎ) ಎಂದು ಗುರುತಿಸಲಾಯಿತು. ನಿ.ಪಿ.**1** ನ್ನು ಆ ದಿನ ಸಂಜೆ **4.30** ರಿಂದ **05.15** ರವರೆಗೆ ಬರೆಯಲಾಯಿತು.

**3.** ಬಿಳಿ ಬಟ್ಟೆಯಿಂದ ಮೊಹರು ಹಾಕಿದ ಮಾದರಿಯನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ತೆರೆದು ಅದರೊಳಗಿರುವ **02** ವಿಸ್ಕಿಯ ಟೆಟ್ರಾ ಪ್ಯಾಕೆಟುಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.**1** ಮತ್ತು **2** ಎಂದು ಗುರುತಿಸಲಾಯಿತು. ಮು.ಮಾ.**1** ಮತ್ತು **2** ರಾಸಾಯನಿಕ ಪರೀಕ್ಷೆಗಾಗಿ ಪಡೆದ ಮಾದರಿಗಳಾಗಿರುತ್ತವೆ.

(ಮಾನ್ಯ ಸಹಾಯಕ ಸರ್ಕರಿ ಅಭಿಯೋಜಕ ಕೋರಿಕೆ ಮೆರೇಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

ಆ ದಿನ ಆರೋಪಿಯನ್ನು ಚಾ.ಸಾ.**1** ರವರು ಮಧ್ಯವನ್ನು ದಾಸ್ತಾನು ಮಾಡಲು ಪರವಾನಗಿ ಇರುವ ಬಗ್ಗೆ ವಿಚಾರಿಸಿದಾಗ ಆರೋಪಿ ಇಲ್ಲ ಎಂದು ನುಡಿದಿರುತ್ತಾರೆಂದರೆ ಸರಿ. ನಿ.ಪಿ.**1** ರ ಕಾಲಕ್ಕೆ ಚಾ.ಸಾ.**3** ರಿಂದ **5** ರವರು ಹಾಜರಿದ್ದರು ಎಂದರೆ ಸರಿ. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಡಿ ವಿ ಎಂ ವಕೀಲರಿಂದಃ</u>

ನಾವು ಆ ದಿನ ನಮ್ಮೊಂದಿಗೆ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ತೆಗೆದುಕೊಂಡು ಹೋಗಿದ್ದೆವು. ಈಗ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ವಿಚಾರವನ್ನು ಮೌಖಿಕವಾಗಿ ಹೇಳಿ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಅಮಾನ್ತು ಪಂಚರು ಸಾಕ್ಷಿದಾರರಿಗೆ ನೋಟೀಸು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು.ಮಾ.**1** ಮತ್ತು **2** ರಂತ ವಿಸ್ಕಿ ಟೆಟ್ರಾ ಪ್ಯಾಕೆಟುಗಳು ಸಾಮಾನ್ಯವಾಗಿ ಎಲ್ಲಾ ಬಾರ್ ಮತ್ತು ರೆಸ್ಟೋರೆಂಟ್ ಗಳಲ್ಲಿ ಲಭ್ಯವಾಗುತ್ತವೆಂದರೆ ಸರಿ. ಆರೋಪಿಯ ಚಿಲ್ಲರೆ ಅಂಗಡಿಗೆ ವಿದ್ಯುತ್ ಸಂಪರ್ಕ ಇತ್ತು. ಸ್ಥಳದಲ್ಲಿ ಪಂಚರು ಸಾಕ್ಷಿದಾರರಲ್ಲದೆ ಇತೆ ಗ್ರಾಮಸ್ಥರು ಇದ್ದರು. ನಾನು ಹೇಳುವಂತೆ ಆರೋಪಿ ಅಂಗಡಿಯಲ್ಲಿ ಯಾವುದೇ ಮಧ್ಯ ಇರಲಿಲ್ಲ ಎಂದರ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕಾಗಿ ನಮ್ಮ ಮೇಲಾಧಿಕಾರಿಗಳು ಈ ಪ್ರಕರಣವನ್ನು ಆರೋಪಿ ವಿರುದ್ದ ದಾಖಲಿಸಿದ್ದು ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನಾನಾಗಲೀ, ಚಾ.ಸಾ.**1** ರವರಾಗಲೀ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.**1** ಮತ್ತು **2** ಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಹಾಗೂ ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ ಇದೆ.**

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.